**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎ.ಶರವಣ (ವಿಧಾನ ಸಭೆಯಿಂದ ಚುನಾಯಿತರು), ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.**

**ವಿಷಯ**: ಭಾರತವು ಕೃಷಿ ಪ್ರಧಾನ ದೇಶ ಹೆಚ್ಚಿನ ಜನರಿಗೆ ಕೃಷಿಯೇ ಜೀವನಾಧಾರ, ರೈತರ ಫಸಲು ಕೈಕೊಟ್ಟ ಸಂದರ್ಭದಲ್ಲಿ ರೈತರ ಬೆಳೆ ವಿಮೆ ಪರಿಹಾರ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು 2016 ಜನವರಿ 13 ರಂದು ಜಾರಿಗೆ ತಂದಿತು. ಅದರಂತೆ, ಕೃಷಿ ಇಲಾಖೆಗಳ ಅಂಕಿ ಅಂಶಗಳು ಪ್ರಕಾರ 2016-17 ರಿಂದ 2022-23 ರ ಅವಧಿಯಲ್ಲಿ ವಿಮಾ ಕಂಪನಿಗಳಿಗೆ ಸುಮಾರು 2,132 ಕೋಟಿ ರೂ.ಗಳ ಲಾಭ ಗಳಿಸಿವೆ. ರಾಜ್ಯ ಸರ್ಕಾರದ ವರದಿಯ ಪ್ರಕಾರ 2019-20 ರಲ್ಲಿ 10.46 ಲಕ್ಷ ಹೆಕ್ಟೆರ್ 2021-22ರಲ್ಲಿ 6 ಲಕ್ಷ ಹೆಕ್ಟರ್ ಬೆಳೆ ಹಾನಿಯಾಗಿರುತ್ತದೆ. ಎಂದು ವರದಿ ಮಾಡಲಾಗಿದ. ಆದರ ತದ್ವಿರುದ್ಧವಾಗಿ ವಿಮಾ ಕಂಪನಿಗಳು ಇಷ್ಟೊಂದು ನಷ್ಟವಾಗಿರುವುದಿಲ್ಲವೆಂದು ತಿಳಿಸಿವೆ. ಇದರಲ್ಲಿ ಯಾವುದು ಸತ್ಯವೆಂದು ತಿಳಿಯದೆ ರೈತರು ಕಂಗಾಲಾಗಿದ್ದಾರೆ. ಹಾಗೆಯೇ, ಈ ಮೂರು ವರ್ಷಗಳಲ್ಲಿ ವಿಮಾ ಕಂಪನಿಗಳು ಕ್ರಮವಾಗಿ 942,890 ಮತ್ತು 720 ಕೋಟಿ ರೂ. ಆದಾಯ ಗಳಿಸಿರುತ್ತವೆ. ನಷ್ಟ ಅನುಭವಿಸಿದ ಅರ್ಹ ರೈತರಿಗೆ ಪರಿಹಾರ ಮಾತ್ರ ದೊರಕುತ್ತಿಲ್ಲ. ಅಲ್ಲದೇ, 2022-2023 ನೇ ಸಾಲಿನ ಹಿಂಗಾರು ಅವಧಿಯ ಪರಿಹಾರ ಇನ್ನೂ ನೀಡಿರುವುದಿಲ್ಲ. ಪ್ರಸ್ತುತ ಈ ಯೋಜನೆಯು ವಿಮಾ ಕಂಪನಿಗಳ ಪರವಾಗಿ ಇದೆ. ಇದು ಈ ಯೋಜನೆಯ ವಿಶ್ವಾಸಾರ್ಹತೆಯನ್ನೇ ಪ್ರಶ್ನೆ ಮಾಡುವಂತಾಗಿದೆ. ಈ ಯೋಜನೆಯಲ್ಲಿ ಪರಿಹಾರ ನೀಡಲು 7 ವರ್ಷಗಳ ಇಳುವರಿ ಲೆಕ್ಕಾಚಾರದ ಮೇಲೆ ಪರಿಹಾರದ ಮೊತ್ತ ನಿಗದಿಪಡಿಸಲಾಗುತ್ತಿದೆ. ಬೆಳೆ ಹಾನಿ ತಿಂಗಳ ನಂತರ ಸಮೀಕ್ಷೆಗೆ ಬರುತ್ತಿರುವುದರಿಂದ ಅಲ್ಲಿ ಬೆಳೆ ಕಾಣದೇ ಸಮರ್ಪಕ ಪರಿಹಾರ ಸಿಗುತ್ತಿಲ್ಲ. ಬೆಳೆ ಪರಿಹಾರ ಸಿಗದೇ ಇತ್ತೀಚೆಗೆ ರಾಯಚೂರು ಜಿಲ್ಲೆಯಲ್ಲಿ ಕೆಲವು ರೈತರು ಪೋಲೀಸ್ ಠಾಣೆಯಲ್ಲಿ ಕೇಸನ್ನು ಸಹ ದಾಖಲಾಗಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಆದ್ದರಿಂದ ಈ ಯೋಜನೆಯಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಹೀಗಾಗಿ ಯೋಜನೆಯ ಕೆಲ ನಿಯಮಗಳಿಗೆ ತಿದ್ದುಪಡಿ ತರಬೇಕು ಇಲ್ಲವೇ ಸರ್ಕಾರವೇ ಅನುಷ್ಠಾನದ ಜವಾಬ್ದಾರಿ ತೆಗೆದುಕೊಳ್ಳಬೇಕು ಅಥವಾ ಎಲ್.ಐ.ಸಿಗೆ ಅನುಷ್ಠಾನದ ಹೊಣೆ ನೀಡಲು ಸರ್ಕಾರವು ಸೂಕ್ತ ಕಾನೂನು ರಚಿಸಿ ರಾಜ್ಯದ ರೈತರ ಹಿತ ಕಾಪಾಡಬೇಕೆಂದು ಸರ್ಕಾರಕ್ಕೆ ಆಗ್ರಹಿಸುತ್ತೇನೆ.

**ಉತ್ತರ:** ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯು ಇಳುವರಿ ಹಾಗೂ ಕ್ಷೇತ್ರ ಆಧಾರಿತ ಯೋಜನೆಯಾಗಿದ್ದು ಪ್ರತಿ ಹಂಗಾಮಿನಲ್ಲಿ ಜಿಲ್ಲಾವಾರು ಬೆಳೆಗಳನ್ನು ವಿಮಾ ಘಟಕವಾರು ಅಧಿಸೂಚಿಸಲಾಗುತ್ತಿದೆ. ಅತಿವೃಷ್ಟಿ ಅಥವಾ ಅನಾವೃಷ್ಟಿ ಸಂದರ್ಭಗಳಲ್ಲಿ ಬೆಳೆ ಹಾನಿಯಾದಲ್ಲಿ ಬೆಳೆ ವಿಮೆಗೆ ನೋಂದಾಯಿಸಿದ ರೈತರು ನಷ್ಟದ ಬಗ್ಗೆ ದೂರು (intimation) ಸಲ್ಲಿಸಿದ್ದಲ್ಲಿ, ಕೇಂದ್ರ ಸರ್ಕಾರದ PMFBY ಮಾರ್ಗಸೂಚಿಯನ್ವಯ ಬೆಳೆ

ಹಾನಿ ಪ್ರಮಾಣವನ್ನು ಅಂದಾಜಿಸಲು ಜಂಟಿ ಸಮೀಕ್ಷೆಯನ್ನು ಕೈಗೊಂಡು, ಸಮೀಕ್ಷೆಯ ವರದಿಯ ಅನುಗುಣವಾಗಿ ಸಂರಕ್ಷಣೆ ತಂತ್ರಾಂಶದ ಮುಖಾಂತರ ಬೆಳೆ ವಿಮೆ ಪರಿಹಾರ ಮೊತ್ತವನ್ನು ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸಲಾಗುತ್ತದೆ.

ಅಲ್ಲದೇ, ಅಧಿಸೂಚಿಸಿದ ಬೆಳೆಗಳಲ್ಲಿ ಬೆಳೆ ಕಟಾವು ಆಧಾರದ ಮೇಲೆ ಬೆಳೆ ವಿಮೆ ಪರಿಹಾರ್ವ ಲೆಕ್ಕ ಹಾಕಲು ಸಂರಕ್ಷಣೆ ತಂತ್ರಾಂಶದಲ್ಲಿ ಕೇಂದ್ರ ಸರ್ಕಾರದಿಂದ ಅನುಮೋದಿಸಿದ ವಿನಾಯ್ತಿಗಳನ್ನು ಅಳವಡಿಸಿಕೊಂಡು ಬೆಳೆ ನೋಂದಣಿಯಾದ ಪ್ರಸ್ತಾವನೆಗಳೊಂದಿಗೆ ಬೆಳೆ ಸಮೀಕ್ಷೆಯ ದತ್ತಾಂಶವನ್ನು ತಾಳೆ ಮಾಡಿ, ತಾಳೆಯಾಗುವ ಪ್ರಸ್ತಾವನೆಗಳಿಗೆ ಮಾತ್ರ ಹೋಬಳಿ/ಗ್ರಾಮ ಪಂಚಾಯತಿ ಮಟ್ಟದಲ್ಲಿ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿ ಮಾಹಿತಿಯು (Actual Yield) ನಿಗಧಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ (Threshold Yield) ಕಡಿಮೆ ಇದ್ದರೆ, ಇಳುವರಿಯ ಶೇಕಡವಾರು ಕೊರತೆಗೆ ಅನುಗುಣವಾಗಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಾಚಾರ ಮಾಡಿ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲಾಗುತ್ತದೆ.

2016-17 ರಿಂದ 2021-22 ರ ಅವಧಿಯಲ್ಲಿ ಒಟ್ಟು ರೂ. 7525.40 ಕೋಟಿಗಳನ್ನು 59.87 ಲಕ್ಷ ರೈತರಿಗೆ ಬೆಳೆ ವಿಮೆ ಪರಿಹಾರ ಲೆಕ್ಕಾಚಾರ ಮಾಡಲಾಗಿದ್ದು, ಇಲ್ಲಿಯವರೆಗೆ ಒಟ್ಟು ರೂ.7498.26 ಕೋಟಿಗಳನ್ನು 59.64 ಲಕ್ಷ ರೈತರಿಗೆ ಅನುಷ್ಠಾನ ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸಲಾಗಿದ್ದು, ಶೇ.80 payout ಇರುತ್ತದೆ.

2022-23 ರ ಮುಂಗಾರು ಅವಧಿಯಲ್ಲಿ ಒಟ್ಟು ರೂ. 1137.13 ಕೋಟಿಗಳನ್ನು 12.92 ಲಕ್ಷ ರೈತರಿಗೆ ಬೆಳೆ ವಿಮೆ ಪರಿಹಾರ ಲೆಕ್ಕಾಚಾರ ಮಾಡಲಾಗಿದ್ದು, ಇಲ್ಲಿಯವರೆಗೆ ಒಟ್ಟು ರೂ. 1097.99 ಕೋಟಿಗಳನ್ನು 12.48 ಲಕ್ಷ ರೈತರಿಗೆ ಅನುಷ್ಠಾನ ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸಲಾಗಿದೆ.

ಹಿಂಗಾರು 2022-23 ರ ಹಂಗಾಮಿನ ಎಲ್ಲಾ ಅಧಿಸೂಚಿತ ವಿಮಾ ಘಟಕಗಳಿಗೆ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಅಂತಿಮ ಇಳುವರಿ ಮಾಹಿತಿಯನ್ನು ಸಂರಕ್ಷಣೆ ತಂತ್ರಾಂಶದಲ್ಲಿ ಅಳವಡಿಸಿದ್ದು, ಪ್ರಸ್ತುತ ಬೆಳೆ ಸಮೀಕ್ಷೆ ದತ್ತಾಂಶವನ್ನು ಬೆಳೆ ವಿಮೆ ನೋಂದಣಿ ಪ್ರಸ್ತಾವನೆಗಳೊಂದಿಗೆ ಸಂರಕ್ಷಣೆ ತಂತ್ರಾಂಶದಲ್ಲಿ Integrate ಮಾಡುವ ಕಾರ್ಯ ಪ್ರಗತಿಯಲ್ಲಿರುತ್ತದೆ.

2019-20ನೇ ಸಾಲಿನಲ್ಲಿ 5.78 ಲಕ್ಷ ಹೆಕ್ಟೇರ್ ವಿಸ್ತೀರ್ಣಕ್ಕೆ ಬೆಳೆ ವಿಮೆ ಪರಿಹಾರವಾಗಿ ಒಟ್ಟು ರೂ.876.35 ಕೋಟಿಗಳನ್ನು 8.55 ಲಕ್ಷ ರೈತರಿಗೆ ಮತ್ತು 2021-22 ನೇ ಸಾಲಿನಲ್ಲಿ 7.95 ಲಕ್ಷ

ಹೆಕ್ಟೇರ್ ವಿಸ್ತೀರ್ಣಕ್ಕೆ ಬೆಳೆ ವಿಮೆ ಪರಿಹಾರವಾಗಿ ಒಟ್ಟು ರೂ.869.06 ಕೋಟಿಗಳನ್ನು 8.56 ಲಕ್ಷ ರೈತರಿಗೆ ಅನುಷ್ಠಾನ ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸಲಾಗಿದೆ.

2019-20 ರಿಂದ 2021-22 ರ ಅವಧಿಯಲ್ಲಿ ಒಟ್ಟು ರೂ.2401.15 ಕೋಟಿಗಳನ್ನು 22.39 ಲಕ್ಷ ರೈತರಿಗೆ ಬೆಳೆ ವಿಮೆ ಪರಿಹಾರ ಲೆಕ್ಕಾಚಾರ ಮಾಡಲಾಗಿದ್ದು, ಇಲ್ಲಿಯವರೆಗೆ ಒಟ್ಟು ರೂ.2375.26 ಕೋಟಿಗಳನ್ನು 22.18 ಲಕ್ಷ ರೈತರಿಗೆ ಅನುಷ್ಠಾನ ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸಲಾಗಿದೆ.

PMFBY ಮಾರ್ಗಸೂಚಿಯನ್ವಯ ಹಿಂದಿನ 7 ವರ್ಷಗಳಲ್ಲಿ ಉತ್ತಮ 5 ವರ್ಷಗಳ ಸರಾಸರಿ ಇಳುವರಿಯನ್ನು ಪರಿಗಣಿಸಿ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿಯನ್ನು ಹೋಲಿಸಿ ಶೇಕಡಾವಾರು ಇಳುವರಿ ಕೊರತೆಯ ಆಧಾರದ ಮೇಲೆ ಅರ್ಹ ರೈತರಿಗೆ ಬೆಳೆ ವಿಮೆ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲಾಗುತ್ತದೆ.

ರಾಯಚೂರು ಜಿಲ್ಲೆಯ 2022-23ರ ಮುಂಗಾರು ಹಂಗಾಮಿನಲ್ಲಿ ಸಿರವಾರ ತಾಲ್ಲೂಕಿನ ಮಾಡಗಿರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಣ್ಣ ಹೊಸೂರು, ಮಾಡಗಿರಿ, ಹಳ್ಳಿ, ಗ್ರಾಮಗಳಲ್ಲಿ ಭತ್ತ ಬೆಳೆಗೆ 596 ಸಂಖ್ಯೆಯ ರೈತರು ರೂ.306.65 ಲಕ್ಷ ವಿಮೆ ಪಡೆದಿರುತ್ತಾರೆ. ರೈತರ ದೂರಿನನ್ವಯ ಬೇರೆಯವರು ಜಮೀನಿನ ಮಾಲೀಕರ ಗಮನಕ್ಕೆ ಬಾರದೇ ವಿಮಾ ಕಂತನ್ನು ಪಾವತಿಸಿ 51 ರೈತರು ರೂ.53.78 ಲಕ್ಷದ ವಿಮಾ ನಷ್ಟ ಪರಿಹಾರವನ್ನು ಪಡೆದಿರುತ್ತಾರೆ. ಈ ಕುರಿತು ಸಿರವಾರ ಪೋಲಿಸ್ ಠಾಣೆಯಲ್ಲಿ ದಿನಾಂಕ:20.06.2023 ರಂದು FIR No.0083/2023 ದೂರು ದಾಖಲಿಸಲಾಗಿದೆ.

ಸದರಿ ನ್ಯೂನ್ಯತೆಯು ಮರುಕಳಿಸದಂತೆ ಪ್ರಸ್ತುತ ಸಾಲಿನಿಂದ ರೈತರ FRUITS ID ಯನ್ನು ಕಡ್ಡಾಯವಾಗಿ ಹೊಂದಿದ್ದಲ್ಲಿ ಮಾತ್ರ ಯೋಜನೆಗೆ ನೋಂದಣಿಯಾಗುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಅನುಷ್ಠಾನಗೊಳಿಸಲು ಖಾಸಗಿ ಸಂಸ್ಥೆ ಅಲ್ಲದೆ ಸರ್ಕಾರಿ ಸಾಮ್ಯದ ಸಂಸ್ಥೆಗಳನ್ನು ಕೇಂದ್ರ ಸರ್ಕಾರದಿಂದ ಎಂಪ್ಯಾನೆಲ್ ಮಾಡಲ್ಪಟ್ಟಿದೆ. ಕೇಂದ್ರ ಸರ್ಕಾರದ ಮಾರ್ಗ ಸೂಚಿಯಂತೆ, empanel ಆದ ಸರ್ಕಾರಿ ವಿಮಾ ಸಂಸ್ಥೆ ಹಾಗೂ ಇತರೆ ಖಾಸಗಿ ವಿಮಾ ಸಂಸ್ಥೆಗಳಿಗೆ ಟೆಂಡರ್ ಕರೆದು ನಿರ್ದಿಷ್ಟ ಮಾನದಂಡಗಳನ್ನು ಪೂರೈಸಿದ ಸಂಸ್ಥೆಗಳನ್ನು ಮಾತ್ರ ಯೋಜನೆಯ ಅನುಷ್ಠಾನಕ್ಕಾಗಿ ಆಯ್ಕೆ ಮಾಡಲಾಗುವುದು. ಆಯ್ಕೆಯಾದ ವಿಮಾ ಸಂಸ್ಥೆಗಳು ರಾಜ್ಯದ ಆಯಾ ಜಿಲ್ಲೆಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ.

ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಮಾರ್ಗಸೂಚಿಯಲ್ಲಿ ಸೂಚಿಸುವ ನಿರ್ದೇಶನಗಳಂತೆ ಅಳವಡಿಸಿಕೊಳ್ಳಲಾಗುತ್ತಿದ್ದು, ಯೋಜನೆಯನ್ನು ಪರಿಣಾಮಕಾರಿಯಾಗಿ ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಕೆಲವೊಂದು ಮಾರ್ಪಾಡುಗಳನ್ನು ಅಳವಡಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

*ಸಂಖ್ಯೆ: ಕೃಇ 61 ಎಎಂಎಸ್ 2023.*

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು